ಹೆಸರು ಮರಿಗೌಡನಹಳ್ಳಿ ಅಂತ ಇಟ್ಟುಕೊಳ್ಳಿ. ಅದೇ ಊಟಿಗೆ ಹೋಗೋ ದಾರಿಯಲ್ಲಿ– ಮೊದಲು ಇದ್ದದ್ದು ಅಲ್ಲೇ. ನಂತರ ಯಾರದ್ದೋ ಕಾಲಕ್ಕೆ ನಾವು ಮಂಡ್ಯದ ಹತ್ತಿರ ಬಂದೆವು ಅಂತ ಹೇಳ್ತಾರೆ. ಮನೆ ಹಿರಿಯರನ್ನು ಕೇಳಿದರೆ ಅಲ್ಲಿ ವಿದೇಶಿಗಳು ಆಕ್ರಮಣ ಮಾಡಿದರು, ಓಡಿ ಬಂದೆವು ಮರ್ಯಾದೆ ಉಳಿಸಿಕೊಳ್ಳಲು ಅಂತಾರೆ. ಸ್ವಲ್ಪ ದೂರದವರನ್ನು ಕೇಳಿದರೆ, 'ಎಂಥಾ ಸುಡಗಾಡು ಇಲ್ಲ, ಯಾರಿಗೆ ಗೊತ್ತು, ಆ ಶಿವನೇ ಬಲ್ಲ'.

★★★

ಸ್ವಲ್ಪ ಮುಂದುವರಿಸೋಣ.

ಹಾಗೆ ಬಂದವರು ದೊಡ್ಡಗೌಡರ ಹತ್ತಿರ ಕೆಲಸಕ್ಕೆ ಸೇರಿಕೊಂಡರು. ಕೆಲಸಕ್ಕೆ ಅಂತ ಹೇಳೋದಕ್ಕಿಂತ ಜೀತಕ್ಕೆ ಅಂತ ಹೇಳೋದು ನೂರಕ್ಕೆ ನೂರು ಸರಿಯಾದ ಮಾತು. ಮೊದ ಮೊದಲು ಅವರ ಮನೆ ಕೊಟ್ಟಿಗೆ ಕೆಲಸ ಮಾಡುತ್ತಿದ್ದರು. ಸಗಣಿ ತೆಗೆಯೋದು, ಹುಲ್ಲು ಹಾಕೋದು ಹೀಗೆ. ಹಟ್ಟಿ ಕೆಲಸ ಅಂದ್ರೆ ಇರುತ್ತದಲ್ಲ...

ಒಮ್ಮೆ ದೊಡ್ಡಗೌಡರ ಗೇಣಿ ಮಾಡಿಕೊಂಡಿದ್ದ ಆಳು ಹನುಮಪ್ಪನ ಮೇಲೆ ಗೌಡರು ಬೆಂಕಿಯಾಗಿದ್ದರು. ವಿಷಯ ದೊಡ್ಡದಲ್ಲ ಸಣ್ಣದೇ. ಈಗ ನೋಡಿದರೆ ಅದು ವಿಷಯವೇ ಅಲ್ಲ. ದೊಡ್ಡಗೌಡರು ಎಂದರೆ ಜನರಿಗೆ ಗೌರವ. ಗೌರವಕ್ಕಿಂತ ಭಯ. ಈ ಭಯದಿಂದ ಭಕ್ತಿ. ಭಕ್ತಿ ಎಂದರೆ... ಅವರು ರಸ್ತೆಯಲ್ಲಿ ಹೋಗುತ್ತಿದ್ದರೆ ದಾರಿಯಲ್ಲಿ ಸರಿದು ಬದಿಗೆ ನಿಲ್ಲಬೇಕಿತ್ತು. ಪಂಚೆ ಎತ್ತಿ ಕಟ್ಟಿದರೆ ಕೆಳಕ್ಕೆ ಬಿಟ್ಟು ಕೈಕಟ್ಟಿ ನಿಲ್ಲಬೇಕಿತ್ತು... ಗೌಡರು ಕಿರೀಗಣ್ಣಿನಲ್ಲಿ ಇದನ್ನೆಲ್ಲಾ ಗಮನಿಸುತ್ತಾ ನಡೆಯುತ್ತಿದ್ದರು. ನೋಡಲು ಭರ್ಜರಿ ಆಳು, ಗಲ್ಲಾಮೀಸೆ, ತಲೆಗೆ ಒಂದು ರುಮಾಲು. ಒಂದು ಉದ್ದಕೋಟು, ಎಡಗೈಯಲ್ಲಿ ಒಂದು ದೊಣ್ಣೆ. ಸರಪರ ಗುಟ್ಟುವ ಚರ್ಮದ ಚಪ್ಪಲಿ... ಮೀಸೆಗೆ ದಿವಸ ಒಂದು ಬಾಟ್ಲಿ ಕೊಬ್ಬರಿ ಎಣ್ಣೆ ಹಾಕಿ ತಿಕ್ಕುತ್ತಾರಂತೆ.. ಅದಲ್ಲಿ ನಿಂಬೆಹಣ್ಣು ಇಡಬಹುದಂತೆ... ಇಂತಹ ಹೇಳಿಕೆಗಳು ಊರೆಲ್ಲಾ ಹಬ್ಬಿದ್ದವು. ಇದರ ವಸ್ತುಸ್ಥಿತಿ ಯಾರಿಗೆ ಬೇಕಾಗಿದೆ. ಒಟ್ಟು ಇದೊಂದು ಗುಟ್ಟು ಎಂಬಂತೆ ತಮಗೆ ಮಾತ್ರ ಇದು ಗೊತ್ತಿದೆ ಎನ್ನುವಂತೆ, ತಮಗೆ ಗೌಡರೇ ಹೇಳಿದರು ಅಂತರಂಗದಲ್ಲಿ ಕರೆದು ಎಂಬಂತೆ ಪ್ರತಿಯೊಬ್ಬರೂ ಮಾತನಾಡುತ್ತಿದ್ದರು...

ಅದು ಹಾಗಿರಲಿ...

ಇಂಥಾ ಗೌಡರು ಆದಿನ ಬರುವಾಗ ಹನುಮಪ್ಪ ಕೆರೆಯ ಮೇಲಿರುವ ಗುಡ್ಡದ – ಗುಡ್ಡ ಅಂದರೆ ಮಣ್ಣಿನ ಗುಪ್ಪೆಯ ಮೇಲೆ ಕುಳಿತಿದ್ದವನು ಎದ್ದು ನಿಲ್ಲಲಿಲ್ಲ ಎಂದರೆ... ಕೈಯಲ್ಲಿ ಬೀಡಿ ಬೇರೆ... ಬೀಡಿಯಿಂದ ಹೊಗೆ ಬೇರೆ. ಗೌಡರು ಕಿರಿಗಣ್ಣಿನಲ್ಲಿ ನೋಡಿದರು... ಎಲಾ ಇವನ... ಒಮ್ಮೆ ಕ್ಯಾಕರಿಸಿ ತುಪ್ಪಿದಂತೆ ಶಬ್ದ ಮಾಡಿದರು... ಅಬ್ಬಾ... ಹಾಗೇ ಕುಳಿತಿದ್ದಾನೆ. ಕೈಯಲ್ಲಿ ಬೀಡಿ, ಬಾಯಲ್ಲಿ ಹೊಗೆ... ಎಲಾ ಚೋದರಿ ಮಗನೆ... ನನ್ನ ಮನೆ ಭತ್ತ ತಿಂದೇ ಇಷ್ಟು ಸೊಕ್ಕೇ... ಉಗ್ರಾವತಾರ ತಳೆದು ದೊಣ್ಣೆ ಕುಟ್ಟುತ್ತಾ ಮನೆಗೆ ಬಂದು ದೊಣ್ಣೆ ಬಿಸಾಡಿದರು. ಅದು ಹೋಗಿ ಕಟ್ಟಿದ್ದ ನಾಯಿಗೆ ಬಿದ್ದು ಅದು ಕೊಂಯ್ ಕೊಂಯ್ ಎಂದು ಕಿರುಚಲು ಶುರುಮಾಡಿತು. ನಾಯಿಯ ಕಿರುಚುವಿಕೆ ಕೇಳಿ ಒಳಗಿನಿಂದ ಗೌಡತಿ, ಹಟ್ಟಿಯಲ್ಲಿದ್ದ ನಮ್ಮಜ್ಜ ಮರಿಗೌಡ ಓಡೋಡಿ ಬಂದರು... ಗೌಡತಿ ಗೌಡರ ಕೆಂಪು ಕಣ್ಣು